ಅ) ಹಿಂದುಳಿದ ವರ್ಗಕ್ಕೆ ಸೇರಿದ ಮೀಸಲಾತಿ ಸ್ಥಾನಗಳನ್ನು ಸಾಮಾನ್ಯ ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಗಳ ಪರಸ್ಪರ ಬದಲಾವಣೆಯಿಂದ ನಿಗಧಿಪಡಿಸತಕ್ಕದ್ದು.

ಮೈಸೂರು ನಗರದಲ್ಲಿ ಎ.ಡಿ.ಬಿ. ಯೋಜನೆ ಕಾಮಗಾರಿಗಳು

836 (1036) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಎ.ಡಿ.ಬಿ. ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ವಿವಿಧ ಯೋಜನೆಗಳ ಕಾಮಗಾರಿಗಳಲ್ಲಿ ಯಾವ ಯಾವ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದೆ; ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿಲ್ಲ;

ಆ) ಪೂರ್ಣಗೊಳ್ಳದಿರುವ ಕಾಮಗಾರಿಗಳು ಪೂರ್ಣಗೊಳ್ಳುವುದು ಯಾವಾಗ; ಕಾಲ ನಿಗಧಿಪಡಿಸಲಾಗಿದೆಯೇ;

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಮೈಸೂರು ನಗರದಲ್ಲಿ ಎ.ಡಿ.ಬಿ. ಯೋಜನೆಯಡಿ ಒಟ್ಟು 27 ಕಾಮಗಾರಿಗಳನ್ನು ತೆಗೆದುಕೊಳ್ಳಲು ನಿಯೋಜಿಸಲಾಗಿದೆ. ನಡೆಯುತ್ತಿರುವ 22 ಕಾಮಗಾರಿಗಳಲ್ಲಿ ಮೂರು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಅವು ಯಾವುವೆಂದರೆ, ಕಸದ ತೊಟ್ಟಿ ಕಾಮಗಾರಿ, ಘನತ್ಯಾಜ್ಯ ವಸ್ತುಗಳ ವಿಲೇವಾರಿ ಉಪಕರಣಗಳು, ಹಾಗೂ ಲೀಕ್ ಡಿಟ್ಟೆಕ್ಷಣ ಉಪಕರಣಗಳನ್ನು ಖರೀದಿಸಲಾಗಿದೆ. ಉಳಿದ 19 ಕಾಮಗಾರಿಗಳು ವಿವಿಧ ದಂತದ ಪ್ರಗತಿಯಲ್ಲಿರುತ್ತದೆ. ಉಳಿಕೆ 5 ಕಾಮಗಾರಿಗಳಲ್ಲಿ (27-22) ಎರಡು ಕಾಮಗಾರಿಗಳು ಟೆಂಡರ್ ಆಗಿದ್ದು, ಉಳಿದ 3 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಾಗಿದೆ. ಇದರೊಟ್ಟಿಗೆ ಕಡಿಮೆ ವೆಚ್ಚದ ಶೌಚಾಲಯಗಳು ಕಾಮಗಾರಿ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.

ಆ) ಹಾಲಿ ಪ್ರಗತಿಯಲ್ಲಿರುವ 19 ಕಾಮಗಾರಿಗಳಲ್ಲಿ, ಎಲ್ಲಾ ಕಾಮಗಾರಿಗಳು 2001ರ ಅಂತ್ಯದೊಳಗೆ ಪೂರ್ಣಗೊಳ್ಳುವ ಸಂಭವವಿದೆ.

ಟೆಂಡರ್ ಆಗಬೇಕಾಗಿರುವ ಕಾಮಗಾರಿಗಳು 2002ರ ಅಂತ್ಯದವರೆಗೂ ಮುಂದುವರಿಯಬಹುದಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಕೀರ್ಣ

837 (1039) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಗೋಕುಲ ಬಡಾವಣೆಯಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಕೀರ್ಣ ನಿರ್ಮಿಸಿ ಎಷ್ಟು ವರ್ಷಗಳಾದವು.